

ಎತ್ತರದ ವ್ಯಕ್ತಿಯ ಜತೆ ನಿಂತ ಮಕ್ಕಳ ಸಂಭ್ರಮ

# ಭಾರತದ 'ಲಂಬೂ'!

ಈತ ನಮ್ಮ ದೇಶದ ಅತ್ಯಂತ ಎತ್ತರದ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರನಾಗಿರುವ ಪಾಲಿಪಕ ಗಟ್ಟಯ್ಯ. ಸುಮಾರು 40ರ ಹರೆಯದ ಈತನ ಎತ್ತರ ಏಳೂವರೆ ಅಡಿಗಳು. ಹೈದರಾಬಾದ್‌ನ ಆರ್ಟ್ಸ್ ಅಂಡ್ ಕ್ರಾಫ್ಟ್ ಸೆಂಟರ್‌ನಲ್ಲಿ 2011ರ ಡಿಸೆಂಬರ್‌ನಲ್ಲಿ ಗಟ್ಟಯ್ಯ ಭಾರತದ ಅತಿ ಎತ್ತರದ ವ್ಯಕ್ತಿ ಎಂದೆನಿಸಿಕೊಂಡ.

ಈ ಸೆಂಟರ್‌ಗೆ ಭೇಟಿ ಕೊಡುವವರು ಗಟ್ಟಯ್ಯನ ಜತೆ ನಿಂತು ಫೋಟೊ ತೆಗೆಸಿಕೊಳ್ಳುತ್ತಾರೆ. ಆದರೆ ಇವನ ಜತೆಗೆ ಫೋಟೊ ಬೇಕಾದವರು ಗಟ್ಟಯ್ಯನಿಗೆ ಹಣ ಕೊಡಬೇಕು.

ಯಾವುದೋ ಸೋಂಕಿಗೆ ತುತ್ತಾದ ಈತನ ಕಾಲಿಗೆ ಶಸ್ತ್ರಚಿಕಿತ್ಸೆ ಮಾಡಬೇಕಾಗಿ ಬಂತು. ಹೀಗೆ ಈತ ಕಾಲು ಕಳೆದುಕೊಂಡ. ಮಾರ್ಚ್ 2011ರಲ್ಲಿ ಚಾರಿಟೇಬಲ್ ಸಂಸ್ಥೆಯೊಂದು ಈತನಿಗೆ ಕೃತಕ ಕಾಲು ತಯಾರಿಸಿ ನೀಡಿದೆ. ಈ ಸಂಸ್ಥೆಗೆ ಈತ 6,500 ರೂಪಾಯಿ ಕೊಟ್ಟು ಕೃತಕ ಕಾಲು ಪಡೆದ.

1975ರಲ್ಲಿ ಹುಟ್ಟಿದ ಗಟ್ಟಯ್ಯ ಭಾರತದ ಅತ್ಯಂತ ಎತ್ತರದ ವ್ಯಕ್ತಿ ಆದರೆ ವಿಶ್ವಮಟ್ಟದಲ್ಲಿ ಎರಡನೆಯ ಅತ್ಯಂತ ಎತ್ತರದ ವ್ಯಕ್ತಿಯಾಗಿದ್ದಾನೆ. (ಟರ್ಕಿಯ ಸುಲ್ತಾನ್ ಕೊಸೆನ್ 8.3 ಅಡಿ ಎತ್ತರವಿದ್ದು ಜಗತ್ತಿನ ಅತ್ಯಂತ ಎತ್ತರದ ವ್ಯಕ್ತಿಯಾಗಿ ಗಿನ್ನೆಸ್ ದಾಖಲೆ ಸೇರಿದ್ದಾನೆ.)

■ ಅವನೀಶ್



ಲಂಬೂ ಜತೆ ಫೋಟೊ ಕ್ಲಿಕ್ಕಿಸಿಕೊಂಡ ಯುವತಿ